**ಓ ಎಸ್ ನಂಃ 223/2022**
**ಪಿ. ಡಬ್ಲ್ಯೂ ಃ 1**

**ದಿಃ 13.07.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್ ಆರ್ ಎಸ್ ವಕೀಲರಿಂದ**

**ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.**

ದಿನಾಂಕ ಃ 01.06.2001 ರಂದು ಪ್ರತಿವಾದಿಗಳು ಬರೆದುಕೊಟ್ಟ ಕ್ರಯದ ಕರಾರುಪತ್ರವನ್ನು ಕೊಟ್ಟಿದ್ದು ಅದನ್ನು ನಿಶಾನೆಗೊಳಿಸಲು ಪ್ರತಿವಾದಿ ಪರ ವಕೀಲರು ಆಕ್ಷೇಪಣೆ ವ್ಯಕ್ತಪಡಿಸಿದ್ದು, ಅದು ಕಡಿಮೆ ಛಾಪಾ ಕಾಗದದ ಮೇಲೆ ಬರೆದಿದ್ದರಿಂದ ನಿಶಾನೆಗೊಳಿಸಲು ತಕರಾರು ಮಾಡಿರುತ್ತಾರೆ. ವಾದಿ ಪರ ವಕೀಲರು ಸ್ಟ್ಯಾಂಪ್ ಡ್ಯೂಟಿ ಕೊಡುವುದಾಗಿ ಹೇಳಿರುವುದರಿಂದ ಆ ದಾಖಲೆಯನ್ನು ತಕರಾರಿಗೆ ಒಳಪಟ್ಟು ಅದನ್ನು ನಿ ಪಿ 1 ಎಂದು, ಅದರಲ್ಲಿ ಇರುವ ಪ್ರತಿವಾದಿಗಳ ಸಹಿಗಳನ್ನು ಸಾಕ್ಷಿ ಗುರುತಿಸಿದ್ದು ಅವುಗಳನ್ನು ನಿ ಪಿ 1 ಎ ಮತ್ತು ನಿ ಪಿ 1 ಬಿ ಎಂದು, ಸಾಕ್ಷಿದಾರ ಸಹಿಯನ್ನು ನಿ ಪಿ 1 ಸಿ ಎಂದು, ಸಾಕ್ಷಿದಾರರಾದ ನರಸಮ್ಮ, ಸುನಂದ ರುಕ್ಮಿಣಿ, ನಂಜುಂಡಸ್ವಾಮಿ ಇವರ ಸಹಿಗಳನ್ನು ನಿ ಪಿ 1 ಡಿ ರಿಂದ ನಿ ಪಿ 1 ಜಿ ಎಂದು, ದಾವಾ ಸ್ವತ್ತಿನ ಆರ್ ಟಿ ಸಿ ಯನ್ನು ಕೊಟ್ಟಿದ್ದು ಅದನ್ನು ನಿ ಪಿ 2 ಎಂದು, ಲೀಗಲ್ ನೋಟೀಸ್ ನ ಆಫೀಸ್ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಪಿ 3 ಎಂದು, ಅಂಚೆ ರಶೀದಿಯನ್ನು ಕೊಟ್ಟಿದ್ದು ನಿ ಪಿ 4 ಎಂದು, ಜಾರಿಯಾಗದೆ ವಾಪಸ್ ಬಂದ ಅಂಚೆ ಕವರ್ ನ್ನು ನಿ ಪಿ 5 ಎಂದು ಗುರುತಿಸಲಾಯಿತು. ನಿ ಪಿ 1 ರ ಹಿಂಭಾಗದಲ್ಲಿ ಷರಾ ಬರೆದುಕೊಟ್ಟಿದ್ದಾರೆ ಷರಾವನ್ನು ಕೊಟ್ಟಿದ್ದು ಅದನ್ನು ನಿ ಪಿ 6 ಎಂದು ಗುರುತಿಸಲಾಯಿತು.ದಾವೆಯಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**